**<u>ದಿನಾಂಕಃ  24.07.2025. ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ–</u>**

2. ನಮ್ಮ ಮೇಲಾಧಿಕಾರಿಗಳು ನನಗೆ ಲೋಕಾಯುಕ್ತ ಪೊಲೀಸ್‌ರ ಬಳಿ ಕಳುಹಿಸಿದಾಗ ಲೋಕಾಯುಕ್ತರು ಯಾವ ರೀತಿ ಹೇಳುತ್ತಾರೆ ಆ ರೀತಿ ಪಾಲಿಸಬೇಕೆಂದು ಸೂಚನೆ ನೀಡಿ ಕಳುಹಿಸಿದ್ದರು ಎಂದರೆ ಸರಿ. ಅಲ್ಲಿಗೆ ಹೋದಾಗ ಅಲ್ಲಿಯ ಅಧಿಕಾರಿಗಳು ಸೂಚನೆ ನೀಡಿದ ಪ್ರಕಾರ ನಾನು ನಡೆದುಕೊಂಡಿರುತ್ತೇನೆ ಎಂದರೆ ಸರಿ. ಎ ಸಿ ಬಿ ಕಚೇರಿಯಲ್ಲಿ ಮಾಡಿದ ಬರವಣಿಗೆಯನ್ನು ನಾನು ಅವರಿಗೆ ಯಾವುದೇ ವಿಷಯವನ್ನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ಅಲ್ಲಯ ಕ್ರಮವನ್ನು ವಹಿಸಿರುತ್ತಾರೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯೂ ಪುಸ್ತಕವನ್ನು ನೋಡಿ ಹೇಳಬೇಕಾಗುತ್ತದೆ ಇಲ್ಲದೇ ಹೇಳಲು ಬರುವುದೀಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಚಾಸ–.1 ರರು ಒಂದು ಮೆಮೊರಿ ಕಾರ್ಡ್‌ನ್ನು ಪಡೆದುಕೊಂಡರು ಎಂದು ಹೇಳಿದ್ದು, ಅದು ಯಾವ ಕಂಪನಿಯದ್ದು, ಮತ್ತು ಅದರಲ್ಲಿ ಏನು ಇದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಅದರಲ್ಲಿ ಸಂಭಾಣೆ ಇತ್ತು ಎಂದು ಹೇಳಿದ್ದು , ಅದರಲ್ಲಿ ಏನು ಸಂಭಾಷಣೆ ಇತ್ತು ಹೇಳಲು ಬರುವುದಿಲ್ಲ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ನನ್ನನ್ನು ಎ ಸಿ ಬಿ ಕಚೇರಿಗೆ ಕಳುಹಿಸಿದ ದಿನ ಬಿಟ್ಟು ಮತ್ತೆ ನಾನು ಎ ಸಿ ಬಿ ಕಚೇರಿಗೆ ಹೋಗಿರುವುದಿಲ್ಲ ಎಂದರೆ ಸರಿ. ಫೊನ್ ಸಂಬಾಷಣೆಯನ್ನು ಮಹಜರ್ ನಲ್ಲಿ ಯಾರು ಬರೆದರು ಎಂದು ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಪೋನ್ ಸಂಬಾಷಣೆಯಲ್ಲಿ ಏನೇನು ಇತ್ತು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ.

3. ನಾನು ನ್ಯಾಯಾಲಯದ ಮುಂದೆ ವಸ್ತುಗಳನ್ನು ಗುರುತಿಸಿದ್ದು , ಸದರಿ ಚೀಟಿಗಳ ಮೇಲೆ ನನ್ನ ಸಹಿ ಇದ್ದ ಕಾರಣ ಗುರುತಿಸಿರುತ್ತೇನೆ ಎಂದರೆ ಸರಿ. ಎರಡು ಕಡೆ ಪೋಟೋಗಳನ್ನು ತೆಗೆದರು ಎಂದು ಹೇಳಿದ್ದು ,

ಯಾರು ಮತ್ತು ಯಾವ ಉಪಕರಣದಿಂದ ಮೊಬೈಲ್ ಅಥವಾ ಕ್ಯಾಮಾರದಿಂದ ಪೋಟೋ ತೆಗೆದಿರುತ್ತಾರೆ ಎಂದು ಹೇಳಲು ನನಗೆ ಬರುವುದಿಲ್ಲ ಎಂದರೆ ಸರಿ. ನಾನು ಮತ್ತು ಅಂಬಿಕಾ ರವರ ಮನೆಯವರ ಬಳಿ ಹೋಗಿರುತ್ತೇನೆ ಎಂದು ಹೇಳಿದ್ದು, ಅಗ ನೀವು ಹೊರಗಡೆ ಇದ್ದೀರಿ ಎಂದರೆ ಸಾಕ್ಷಿಯೂ ಹೊರಗಡೆ ಇದ್ದೇ ಎಂದು ನುಡಿಯುತ್ತಾರೆ. ನಾವು ಹೋದ ಸ್ವಲ್ಪ ಹೊತ್ತಿನ ನಂತರ ದೂರುದಾರರು ತನ್ನ ಮಗನನ್ನು ಕಳುಹಿಸಿ 1 ನೇ ಆರೋಪಿಯನ್ನು ಕರೆಸಿಕೊಂಡಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

4. ನಾನು ಅಂಬಿಕಾ ರವರ ಮನೆಯ ಹೊರಗಡೆ ಇದ್ದಾಗ ಅವರ ಮನೆಯ ಹೊರಗಡೆ ಯಾರು ಹೋದರು ಯಾರು ಬಂದರು ಎಂದು ಗಮನಿಸಿರುವುದಿಲ್ಲ ಎಂದರೆ ಸರಿ. ಅಂಬಿಕಾರವರು ಮನೆಯ ಹೊರಗಡೆ ಬಂದಾಗ ನಾನು ಮತ್ತು ಪೊಲೀಸರು ಮನೆಯ ಹೊರಗಡೆ ಹೋಗಿರುತ್ತೆವೆ ಎಂದರೆ ಸರಿ. ಆಗ ನಾನು ಹೊರಗಡೆ ಇದ್ದ ಕಾರಣ ಒಳಗಡೆ ಏನು ನಡೆಯಿತು ಎಂದು ನನಗೆ ಕಂಡಿರುವುದಿಲ್ಲ ಎಂದರೆ ಸರಿ. ಪೊಲೀರು ಒಳಗಡೆ ಹೋದಾಗ ಅಂಬಿಕಾರವರಿಗೆ ದುಡ್ಡು ಏನಾಯಿತು ಎಂದು ಕೇಳಿದಾಗ ಅಂಬಿಕಾ ಆರೋಪಿ ದುಡ್ಡನ್ನು ಕೇಳಿರುವುದಿಲ್ಲ, ನಾನೇ ಆತನಿಗೆ ಜೇಬಿ ದುಡ್ಡನು ಹಾಕಿರುತ್ತೇನೆ ಎಂದು ಹೇಳಿದರು ಎಂದರೆ ಸಾಕ್ಷಿಯೂ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಜನರು ಇದ್ದ ಕಾರಣ ಅಂಬಿಕಾರವರು ಹಣವನ್ನು ಇಂತಹವರಿಗೆ ನೀಡಿರುತ್ತೇನೆ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಎಸಿಬಿ ಯವರು 1 ನೇ ಆರೋಪಿಯನ್ನು ಹಿಡಿದುಕೊಂಡು ಆತನ ಜೇಬಿನಿಂದ ಹಣವನ್ನು ತೆಗೆಸಿರುತ್ತಾರೆ ಎಂದರೆ ಸಾಕ್ಷಿಯೂ ನಾನು ಅದನ್ನು ನೋಡೀರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ಹಣವನ್ನು ಆತ ಹೊರಗಡೆ ತೆಗದ ಬಳಿಕ ಆತನ ಕೈಯನ್ನು ತೊಳೆಸಿರುತ್ತಾರೆ ಎಂದರೆ ಸಾಕ್ಷಿಯೂ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಜನರು ಸೇರಿದ್ದರಿಂದ ಪೊಲಿಸೀರು ಯಾವ ಯಾವ ಕ್ರಮ ಮಾಡಿರುತಾರೆ ಎಂಬುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಬಂದು ನನಗೆ ಎಲೆಲ್ಲಿ ಸಹಿ ಹಾಕಬೇಕು ಎಂದು ಹೇಳಿದ್ದು ಆ ಪ್ರಕಾರ ನಾನು ಸಹಿಯನ್ನು ಹಾಕಿರುತ್ತೇನೆ ಎಂದರೆ ಸರಿ. ನಾನು ಸಹಿ ಹಾಕಿದ ದಾಖಲಾತಿಗಳಲ್ಲಿ ಬರೆದಂತಹ ವಿಷಯಗಳನ್ನು

**Spl.C.No.299/20**
**P.W.-3**
**C.W.-3**

ನಾನು ಹೇಳಿ ಬರೆಸಿರುವುದಿಲ್ಲ ಮತ್ತು ನನಗೆ ಪೊಲೀಸರು ಓದಿ ಹೇಳಿರುವುದಿಲ್ಲ ಎಂದರೆ ಸರಿ. ಅಲ್ಲಿ ಜನರು ತುಂಬಾ ಸೇರಿದ್ದರಿಂದ ಪಾಪಣ್ಣ ರವರನ್ನು ನಾನು ನೋಡಿರುವುದಿಲ್ಲ ಎಂದರೆ ಸಾಕ್ಷಿಯೂ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪಾಪಣ್ಣರವರು ನಾನು ಅಲ್ಲಿಗೆ ಹೋದಾಗ ಇರಲಿಲ್ಲ ಎಂದರೆ ಸರಿ. ನಂತರ ಪಾಪಣ್ಣರವರನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಅವರನ್ನು ಯಾವ ಕಾರಣಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದು ತಿಳಿದಿರುವುದಿಲ್ಲ ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿ ಬಳಿ ಒಂದು ಬ್ಯಾಗ್ ಇತ್ತು ಎಂದು ಹೇಳಿದ್ದು, ಅದನ್ನು ಪೊಲೀಸರು ವಶಕ್ಕೆ ಪಡೆದುಕೊಂರುತ್ತಾರೆ ಸಾಕ್ಷಿಯೂ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬ್ಯಾಗ್ ನಲ್ಲಿ ಏನು ಇತ್ತು ಎಂದು ನಾನು ಪರಿಶೀಲನೆ ಮಾಡಿ ನೋಡಿರುವುದಿಲ್ಲ ಎಂದರೆ ಸರಿ. ನಾನು ಅಲ್ಲಿಗೆ ಹೋದಾಗ ಖಾತೆ ಮಾಡುವ ಅಧಿಕಾರ ಕಂದಾಯ ನಿರೀಕ್ಷಕರಿಗೆ ಇದ್ದು, ಗ್ರಾಮ ಲೆಕ್ಕಾದಿಕಾರಿಗೆ ಇರುವುದಿಲ್ಲ ಎಂಬ ವಿಚಾರ ತಿಳಿದಿರುತ್ತದೆ ಎಂದರೆ ಸರಿ. ನಂತರ ಕಂದಾಯ ನಿರೀಕ್ಷಕರ ಕಚೇರಿಯಿಂದ ಅಂಬಿಕಾರವರಿಗೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಿರುತ್ತಾರೆ ಎಂದರೆ ಸರಿ. ನನ್ನ ಸಹಿಯನ್ನು ಪಡೆದ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯೂ ನನಗೆ ಸರಿಯಾಗಿ ಕಾಣದ ಕಾರಣ ಅದರಲ್ಲಿ ಏನು ಬರೆದಿದೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಹೊರತು ಪಡಿಸಿ ಪುನಃ ನಾನು ಪೋಲೀಸರ ಬಳಿ ಹೋಗಿ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.